ಶ್ರೀ ಕೆ. ಲಕ್ಕಣ್ಣ.—ಅಧ್ಯಕ್ಷರೆ, ನನ್ನ (೧) ಪ್ರಶ್ನೆಗೆ ೧೫ ಘಟಕಗಳು ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ ಅದು ತಪ್ಪು ತಿಳುವಳಿಕೆ. ಕಳೆದ ಐದಾರು ವರ್ಷಗಳಿಂದ ಸುಮಾರು ೫೦ ಘಟಕಗಳು ನೋಂದಾವಣೆಯಾಗಿ ಇದುವರೆಗೂ ಅವರಿಗೆ ಮಾರಾಟ ಮಾಡಲಿಕ್ಕೆ ಅವಕಾಶ ಕೊಟ್ಟಿರುವುದಿಲ್ಲ. ದಯಮಾಡಿ ಹೊಸ ಸಣ್ಣ ಘಟಕಗಳು ಏನಿವೆ ಇವುಗಳಿಗೆ ಈ ಮಾರಾಟ ಮಳಿಗೆಯಲ್ಲಿ ಅವರಿಗೆ ಪ್ರೋತ್ಸಾಹ ಕೊಡತಕ್ಕದ್ದು ಮತ್ತು ಮಾರಾಟ ಮಂಡಳಿಯಿಂದ ಅವರಿಗೆ ಸಹಾಯ ಆಗಬೇಕೆಂದು ನಾನು ಉಪ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀಮತಿ ಸುಮಾ ವಸಂತ.—ಅಧ್ಯಕ್ಷರೆ, ಮಾನ್ಯ ಸದಸ್ಯರು ಉತ್ತಮ ಸಲಹೆಯನ್ನು ಕೊಟ್ಟಿದ್ದಾರೆ. ಸಲಹೆಯನ್ನು ಪರಿಶೀಲಿಸಲಾಗುವುದು.

ಬೆಲೆ ಸ್ಥಿರೀಕರಣ ನಿಧಿ

೧೯. ಶ್ರೀ ಜಿ. ರಾಜುಗೌಡ (ಹಸೂರು).—ಮಾನ್ಯ ರೇಷ್ಮೆ ವ್ಯವಹಾರ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರೇಷ್ಮೆ ಇಲಾಖೆಯಲ್ಲಿ ಬೆಲೆ ಸ್ಥಿರೀಕರಣ ನಿಧಿಯಿಂದ ಯಾವಾಗ ಯಾವ ಸಂಸ್ಥೆಗೆ ಕೊಡಲಾಗಿದೆ ?

ಆ) ಯಾವ ನಿಬಂಧನೆಯ ಮೇಲೆ ಕೊಡಲಾಗಿದೆ ?

ಇ) ಹಾಗಿದ್ದಲ್ಲಿ ನಿಗಧಿಪಡಿಸಿದ ಬಾಬಿಗೆ ಹಣ ವೆಚ್ಚವಾಗಿದೆಯೆ ?

ಶ್ರೀ ಎಂ. ಎಸ್. ಆತ್ಮಾನಂದ (ರೇಷ್ಮೆ ರಾಜ್ಯ ಸಚಿವರು).—

ಅ)

೧. ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ :

		ಲಕ್ಷ ರೂ. ಗಳಲ್ಲಿ
೧೯೬೬–೬೮	...	೨೦–೦೦
೧೯೬೮–೬೯	...	೧೦೦–೦೦
೧೯೬೯–೭೦	...	೧೦೦–೦೦
೧೯೭೦–೭೧	...	೧೫೦೦–೦೦
	ಒಟ್ಟು	೧೪೨೦–೦೦

೨. ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ :

		ಲಕ್ಷ ರೂ. ಗಳಲ್ಲಿ
೧೯೭೦–೭೧	...	೩೦೦–೦೦

ಆ)

೧. ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಗೆ

ಕೆಳಕಂಡ ನಿಬಂಧನೆ ಮತ್ತು ಷರತ್ತುಗಳಿಗೆ ಒಳಪಟ್ಟು ಹಣ ಬಿಡುಗಡೆ ಮಾಡಲಾಗಿದೆ.

ಅ) ಹಣ ಬಿಡುಗಡೆ ಮಾಡಿದ ೨ ವರ್ಷಗಳ ನಂತರ ಹಿಂತಿರುಗಿಸಬೇಕು.

ಆ) ಬಿಡುಗಡೆ ಮಾಡಿದ ಹಣಕ್ಕೆ ವರ್ಷಕ್ಕೆ ಶೇ. ೨ರಂತೆ ಸರಳ ಬಡ್ಡಿ ನೀಡುವುದು.

ಇ) ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯು ಪ್ರತಿದಿನ ರೇಷ್ಮೆ ವಿನಿಮಯ ಕೇಂದ್ರಕ್ಕೆ ಮಾರಾಟಕ್ಕಾಗಿ ಬರುವ ಕಚ್ಚಾರೇಷ್ಮೆಯ ಕನಿಷ್ಟ ಶೇ. ೨೫ರಷ್ಟನ್ನು ಖರೀದಿಸಬೇಕು.

ಈ) ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯು ಪ್ರತಿದಿನ ಪ್ರತಿ ರೇಷ್ಮೆ ವಿನಿಮಯ ಕೇಂದ್ರದಲ್ಲೂ ರೇಷ್ಮೆ ಹರಾಜಿನಲ್ಲಿ ಭಾಗವಹಿಸಬೇಕು.

ಉ) ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯು ಇಲಾಖೆ ನಿಗದಿಪಡಿಸಿದ ಕೆಳ ಬೆಲೆಗಿಂತ ರೇಷ್ಮೆ ಖರೀದಿಸಿದ್ದಲ್ಲಿ ಮತ್ತು ಹೆಚ್ಚಿನ ರೇಷ್ಮೆ, ರೇಷ್ಮೆ ವಿನಿಮಯ ಕೇಂದ್ರಗಳಿಗೆ ಬರುವ ಕಾಲದಲ್ಲಿ ಇಲಾಖೆ ನಿಗದಿ ಪಡಿಸಿದ ಪ್ರಮಾಣಕ್ಕಿಂತ ಕಡಿಮೆ ರೇಷ್ಮೆ ಖರೀದಿಸಿದಲ್ಲಿ ವಾರ್ಜಿನ್ ಹಣವನ್ನು ಹಿಂತಿರುಗಿಸುವಂತೆ ಮಂಡಳಿಯನ್ನು ಕೇಳುವ ಅಧಿಕಾರವು ಪ್ರಾಧಿಕಾರಕ್ಕೆ ಇರುತ್ತದೆ.

ಊ) ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯು ಒಂದು ರೇಷ್ಮೆ ಖರೀದಿ ಸಮಿತಿಯನ್ನು ಬೆಂಗಳೂರು ರೇಷ್ಮೆ ವಿನಿಮಯ ಕೇಂದ್ರದ ರೇಷ್ಮೆ ಮಾರುಕಟ್ಟೆ ಅಧಿಕಾರಿಗಳನ್ನು ಸದಸ್ಯರನ್ನಾಗಿ ಸೇರಿಸಿಕೊಂಡು ರಚಿಸಬೇಕು. ಇದರಿಂದ ಮಂಡಳಿಯು ಪ್ರತಿದಿನ ಖರೀದಿಸಬೇಕಾದ ರೇಷ್ಮೆ ಪ್ರಮಾಣವನ್ನು ನಿಗದಿಪಡಿಸಬಹುದು ಮತ್ತು ಬೆಲೆ ಸ್ಥಿರೀಕರಿಸಲು ಸಹಾಯವಾಗಿ ರೇಷ್ಮೆ ನೂಲು ಬಿಚ್ಚುವವರಿಗೆ ಒದಗಬಹುದಾದ ನಷ್ಟವನ್ನು ತಪ್ಪಿಸಬಹುದು.

ಮತ್ತು

೪ಬ) ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯು ನಿಧಿಯಿಂದ ಬಿಡುಗಡೆ ಮಾಡಿದ ಹಣವನ್ನು ರೇಷ್ಮೆ ವಿನಿಮಯ ಕೇಂದ್ರಗಳಲ್ಲಿ ಕಚ್ಚಾ ರೇಷ್ಮೆಯನ್ನು ಖರೀದಿಸಲು ಮಾತ್ರ ಉಪಯೋಗಿಸಿಕೊಂಡು ರೇಷ್ಮೆ ಬೆಲೆ ಕುಸಿದಾಗ ಸ್ಥಿರೀಕರಿಸಲು ಹೆಚ್ಚಿನ ರೇಷ್ಮೆಯನ್ನು ಖರೀದಿಸಬೇಕು.

೭. ಬೆಲೆ ಸ್ಥಿರೀಕರಣ ನಿಧಿಯಂ ಉದ್ದೇಶಗಳಲ್ಲಿ ರೇಷ್ಮೆ ನೂಲು ಬಿಚ್ಚುವ ಕೈಗಾರಿಕಾ ಘಟಕಗಳಿಗೆ ನೆರವು ನೀಡುವುದು ಕೂಡ ಒಂದಾಗಿದ್ದು, ಕರ್ನಾಟಕ ರೇಷ್ಮೆ ಉದ್ಯಮ ನಿಗಮ ಆಧುನೀಕರಿಸಿದ ಟಿ. ನರಸೀಪುರದ ರೇಷ್ಮೆ ಕೈಗಾರಿಕೆ, ಕರ್ನಾಟಕದಲ್ಲೇ ಅತೀ ಹೆಚ್ಚಿನ ದ್ವಿತಳಿ ರೇಷ್ಮೆ ಗೂಡನ್ನು ನೂಲು ಬಿಚ್ಚುವ ಸಲುವಾಗಿ ಬಳಸಿಕೊಳ್ಳುವ ಏಕೈಕ ಕೈಗಾರಿಕಾ ಘಟಕವಾಗಿರುವುದರಿಂದ ಈ ಕೆಳಗಿನ ನಿಬಂಧನೆಗಳಿಗೆ ಒಳಪಟ್ಟು, ಬೆಲೆ ಸ್ಥಿರೀಕರಣ ನಿಧಿಯಿಂದ, ರೂ. ೪೮೭.೦೦ ಲಕ್ಷ ಹಣವನ್ನು ಕರ್ನಾಟಕ ರೇಷ್ಮೆ ಉದ್ಯಮ ನಿಗಮಕ್ಕೆ ಮಂಜೂರು ಮಾಡಲಾಗಿದ್ದು ಅದರಲ್ಲಿ ರೂ. ೩೦೦.೦೦ ಲಕ್ಷ ಹಣವನ್ನು ಮಾತ್ರ ಈವರೆಗೆ ಬಿಡುಗಡೆ ಮಾಡಲಾಗಿದೆ.

ಅ. ರೇಷ್ಮೆ ನೂಲು ಬಿಚ್ಚುವ ಕಾರ್ಖಾನೆ ಟಿ. ನರಸೀಪುರದ ಕಾರ್ಯನಿರ್ವಾಹದಲ್ಲಿ ಆಗಲಿ ಅಥವಾ ಕರ್ನಾಟಕ ರೇಷ್ಮೆ ಉದ್ಯಮ ನಿಗಮದ ತನ್ನ ಆಧುನೀಕರಿಸದೇ ಇರುವ ಕನಕಪುರ ಘಟಕದಲ್ಲಿ, ಮುಂದೆ ಉಂಟಾಗುವ ಯಾವುದೇ ನಷ್ಟಕ್ಕಾಗಲಿ ಸರ್ಕಾರದ ಹೊಣೆಗಾರಿಕೆ ಯಾವುದೂ ಇರುವುದಿಲ್ಲ.

ಆ. ಭಾರತೀಯ ಕೈಗಾರಿಕೆಗಳ ವಿಸ್ತೀರ್ಣ ಬ್ಯಾಂಕಿನೊಂದಿಗೆ, ಈಗ ನಡೆಸುತ್ತಿರುವ ಪುನಃ ಸಜ್ಜೀಕರಣದ ವ್ಯವಸ್ಥೆಗಾಗಿ ಸರ್ಕಾರದಿಂದ ಬೇರೆ ಯಾವ ಧನ ಸಹಾಯವನ್ನು ನೀಡಲಾಗುವುದಿಲ್ಲ.

ಇ. ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮವು ಹಣಕಾಸು ಸಂಸ್ಥೆಗಳಿಂದ, ಪುನಸಜ್ಜೀವನಕ್ಕಾಗಿ ಹೊಂದಿರುವ ಯಾವ ಹೆಚ್ಚಿನ (ಹಣದ) ಹೊಣೆಗಾರಿಕೆಯನ್ನು ಅದು ತನ್ನ ಆಂತರಿಕ ಸಂಪನ್ಮೂಲಗಳಿಂದ ಸರಿಪಡಿಸಿಕೊಳ್ಳತಕ್ಕದ್ದು.

ಈ. ಈಗ ನೀಡಿರುವ ಧನ ಸಹಾಯವನ್ನು ಸಂಬಂಧಪಟ್ಟ ಹಣಕಾಸು ಸಂಸ್ಥೆಗಳಿಗೆ ಸಾಲವನ್ನು ಮರುಪಾವತಿ ಮಾಡಲು ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು.

೫) ಹಾದು.

ಶ್ರೀ ಜಿ. ರಾಜೂಗೌಡ —ರೇಷ್ಮೆ ಕೃಷಿ ಹಾಗೂ ರೇಷ್ಮೆ ಉದ್ಯಮದಲ್ಲಿರತಕ್ಕ ಯಾವ ಯಾವ ವರ್ಗದವರಿಂದ ಬೆಲೆ ಸ್ಥಿರೀಕರಣ ನಿಧಿಯನ್ನು ರಚಿಸಲಾಗಿದೆ ಆ ವರ್ಗದ ಜನಗಳ ಕಲ್ಯಾಣಕ್ಕಾಗಿ ಮಾತ್ರ ಆ ನಿಧಿಯನ್ನು ಉಪಯೋಗಿಸಬೇಕೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಎಸ್. ಆತ್ಮಾನಂದ.—ಅಧ್ಯಕ್ಷರೆ, ಈ ರೇಷ್ಮೆ ಬೆಲೆ ಸ್ಥಿರೀಕರಣ, ಮಾರುಕಟ್ಟೆ ಶುಲ್ಕ ರಹದಾರಿ ಶುಲ್ಕ ಅಥವಾ ಇತರೆ ಶುಲ್ಕ ಮತ್ತು ಭತ್ಯಗಳು ಇವುಗಳೆಲ್ಲಾ ಸೇರಿ ಬೆಲೆ ಸ್ಥಿರೀಕರಣ ನಿಧಿಯ ಭಾಗವಾಗಿರುತ್ತದೆ. ಇವೊತ್ತು ಬೆಲೆ ಸ್ಥಿರೀಕರಣ ವಿಧಿಯ ಉಪಯೋಗವಾದರೂ ಕೂಡ ರೈತರಿಗೆ ಹಾಗೂ ರೇಷ್ಮೆ ಉದ್ಯಮಕ್ಕೆ ಸಂಬಂಧಪಟ್ಟ ಎಲ್ಲಾ ಅಂಗಗಳ ಸರ್ವತೋಮುಖ ಅಭಿವೃದ್ಧಿಗೆ ಸಹಾಯ ಮಾಡಬೇಕು ಎನ್ನುವ ಒಂದು ಅಂಶವೇ ಈ ಒಂದು ಬೆಲೆ ಸ್ಥಿರೀಕರಣ ನಿಧಿಯ ಅರ್ಥ.

ಶ್ರೀ ಜಿ. ರಾಜೂಗೌಡ.—ಅಧ್ಯಕ್ಷರೆ, ಈ ರೇಷ್ಮೆ ಕೈಗಾರಿಕೆ ನಿಗಮ ಈಗಾಗಲೇ ೩೦ ಕೋಟಿ ರೂಪಾಯಿಗಳನ್ನು ತಿಂದು ಹಾಕಿದೆ. ಇದು ಒಂದು ದೊಡ್ಡ ಬಿಳಿಯ ಆನೆ, ಈ ಬಿಳಿಯ ಆನೆಗೆ ಚಡ್ಡಿ ಹೊಲಿಸಲಿಕ್ಕೆ ಮತ್ತೆ ೫ ಕೋಟಿ ರೂಪಾಯಿ ಕೊಟ್ಟಿದ್ದಾರೆ. ಈ ಬೆಲೆ ಸ್ಥಿರೀಕರಣ ನಿಧಿ ಇರತಕ್ಕಂಥಾದ್ದು ರೇಷ್ಮೆ ಉದ್ಯಮದಲ್ಲಿ, ರೇಷ್ಮೆ ಕೃಷಿಯಲ್ಲಿ ಯಾವ ವರ್ಗದ ಜನರು ಪಾಲ್ಗೊಂಡಿದ್ದಾರೆ ಅವರಿಗೆ ಮಾತ್ರ ಉಪಯೋಗಿಸಬೇಕೆಂದು ಆ್ಯಕ್ಟ್ ಇದೆ. ಆ ಒಂದು ಆ್ಯಕ್ಟ್‌ಗೆ ವಿರುದ್ಧವಾಗಿ ಕಾನೂನು ಬಾಹಿರವಾಗಿ ೫ ಕೋಟಿ ರೂಪಾಯಿ ದುಡ್ಡು ಕೊಟ್ಟಿದ್ದಾರೆ. ರೇಷ್ಮೆ ಉತ್ಪಾದನೆಯ ಅಭಿವೃದ್ಧಿಗೇ ಈ ಹಣವನ್ನು ವಿಚ್ರ್ಯು ಮಾಡಬೇಕೆಂದು ಬೇರೆಯಂದಕ್ಕೆ ವಿಚ್ರ್ಯು ಮಾಡಬಾರದೆಂದು ಇಲ್ಲಿ ಇದೆ. ಕಾನೂನು ಬಾಹಿರವಾಗಿ ೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ ಅದು ತಪ್ಪಾಗಿದೆ ದಯಮಾಡಿ ಅದನ್ನು ವಾಪಸ್ ಪಡೆಯಬೇಕೆಂದು ಒತ್ತಾಯ ಮಾಡುತ್ತೇನೆ. ನಮ್ಮ ರಾಜ್ಯದಲ್ಲಿ ೧೭ ರೇಷ್ಮೆ ಸಹಕಾರ ಸಂಘಗಳು ಏನು ಇವೆ ಈ ಸೊಸೈಟಿಗಳ ಸಾಲದ ಬಡ್ಡಿಯನ್ನು ಮನ್ನಾ ಮಾಡಿದಾಗ ಮಾತ್ರ ಈ ಕೈಗಾರಿಕಾ ಸಹಕಾರ ಸಂಘಗಳು ತಾಪು ಪಡೆದುಕೊಂಡಿರುವ ಸಾಲವನ್ನು ವಾಪಸ್ ಕೊಡುವುದಕ್ಕೆ ಅರ್ಹತೆಯನ್ನು ಹೊಂದುತ್ತವೆ. ದಯಮಾಡಿ ತಾವು ಆ ಕೆಲಸವನ್ನು ಮಾಡುತ್ತೀರಾ ?

ಶ್ರೀ ಎಂ. ಎಸ್. ಆತ್ಮಾನಂದ.—ಈ ಬೆಲೆ ಸ್ಥಿರೀಕರಣದ ಉದ್ದೇಶ ರೇಷ್ಮೆ ನೂಲನ್ನು ಬಿಚ್ಚುವಂತಹ ಕೈಗಾರಿಕಾ ಘಟಕಗಳಿಗೆ ಕೂಡ ನೆರವನ್ನು ಕೊಡುವುದೆಂದು ಇದೆ, ಅವರು ಯಾವ ರೂಲ್ ಅನ್ನು ಕೋಟ್ ಮಾಡಿದರೋ ಅದರಲ್ಲಿ

> "The amount at the credit of the said fund shall not be expended for the purpose of stabilising the prices of cocoons, and silk yarns and for the development of rearing of silk worms, seeds."

ಎಂದು ಇದೆ. ಕೆ. ಎಸ್. ಐ, ಸಿ. ಉದ್ಯಮ ಕೂಡ ರೇಷ್ಮೆ ಕೃಷಿಗೆ ಪೂರಕವಾದಂತಹ ಉದ್ಯಮವಾಗಿದೆ, ಆದರ ಒಂದು ಅಂಗ ಸಂಸ್ಥೆ ಎಂದು ಹೇಳಬಹುದು. ಕೆ. ಎಸ್. ಐ. ಸಿ. ಯವರು ರೋಗಗ್ರಸ್ಥವಾದಂಥ ಸಂಸ್ಥೆಯನ್ನು ಆರೋಗ್ಯಕರವಾಗಿ ಮಾಡಬೇಕೆಂಬ ಉದ್ದೇಶದಿಂದ ಇದನ್ನು ಮಾಡಿದ್ದಾರೆ. ಕರ್ನಾಟಕದಲ್ಲಿ ವಿಶ್ವ ಬ್ಯಾಂಕ್ ನೆರವಿನಿಂದ ಬೈವೋಲ್ಟೈನ್ ರೇಷ್ಮೆ ತಳಿಗಳನ್ನು ಹೆಚ್ಚು ಉತ್ಪಾದನೆ ಮಾಡಿ ಅದನ್ನು ಉಪಯೋಗಿಸಿಕೊಂಡು ಕೆ. ಎಸ್. ಐ. ಸಿ. ಇರತಕ್ಕ ಟೀ ನರಸೀಪುರದಲ್ಲಿನ ನೂಲು ಬಿಚ್ಚುವ ಕಾರ್ಖ ನಿರ್ವಹಣೆಯಲ್ಲಿ ಒಳ್ಳೆಯ ಕೆಲಸವನ್ನು ಮಾಡಬೇಕೆಂಬ ಆಶಯದಿಂದಾಗಿ ಮಾಡಿದ್ದೇವೆ. ಕೆಎಸ್‌ಐಸಿಯನ್ನು ಆರೋಗ್ಯಕರವಾಗಿ ಮುಂದುವರಿಸಬೇಕು ಅದು ಒಳ್ಳೆಯ ರೀತಿಯಿಂದ ಕಾರ್ಯ ಮಾಡಬೇಕೆಂಬ ಉದ್ದೇಶದಿಂದ ಬೆಲೆ ಸ್ಥಿರೀಕರಣ ನಿಧಿಯಿಂದ ೩ ಕೋಟಿ ರೂಪಾಯಿಯನ್ನು ಕೊಟ್ಟಿದೆ. ಇದಂ ಕಾನೂನಿಗೆ ವಿರುದ್ಧವಾಗಿ ಇಲ್ಲ. ಇನ್ನು ಸಹಕಾರ ಸಂಘಗಳ ಬಡ್ಡಿಯನ್ನು ಮನ್ನಾ ಮಾಡುವ ಒಂದು ಒಳ್ಳೆಯ ಸಲಹೆಯನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ಅದು ಬಹಳ ಒಳ್ಳೆಯ ಯೋಜನೆಯಾಗಿದೆ ಅದನ್ನು ಪರಿಶೀಲಿಸಿ ಸಾಧ್ಯವಾದಷ್ಟು ಮಂಟ್ಟಿಗೆ ಬೆಲೆ ಸ್ಥಿರೀಕರಣ ನಿಧಿಯ ಸ್ವಲ್ಪ ಅಂಶದಿಂದಾದರೂ ರೈತರಿಗೆ ರೀಲರುಗಳಿಗೆ ಸಹಾಯ ಮಾಡಬೇಕೆಂದು ಏನು ಹೇಳಿದ್ದೀರಿ ಅದು ಸರಿಯಾಗಿದೆ ಅದನ್ನು ಖಂಡಿತವಾಗಿ ಪರಿಶೀಲಿಸಿ ಮಾಡುತ್ತೇನೆ.

ಶ್ರೀ ಜಿ. ರಾಜೂಗೌಡ.—ನಾನು ಹೇಳುತ್ತಿರುವ ಪ್ರಶ್ನೆಯನ್ನು ಮಾನ್ಯ ಸಚಿವರು ಅರ್ಥ ಮಾಡಿಕೊಳ್ಳಲಿಲ್ಲ. ಯಾವ ಸಂಸ್ಥೆ ಇದಕ್ಕೆ ಸಹಾಯ ಮಾಡಿದೆಯೋ ಆ ಸಂಸ್ಥೆಗೆ ಇವರಂ ಸಾಲವನ್ನು ವಾಪಸ್ ಕೊಡುವುದಕ್ಕೋಸ್ಕರ ಹಣವನ್ನು ಕೊಟ್ಟಿದ್ದಾರೆ. ರೇಷ್ಮೆ ಅಭಿವೃದ್ಧಿಗಾಗಿ ಕೊಟ್ಟಿಲ್ಲ. ಈಗ ನೀಡಿರುವ ಧನ ಸಹಾಯವನ್ನು ಸಂಬಂಧಪಟ್ಟ ಹಣಕಾಸು ಸಂಸ್ಥೆಗಳಿಗೆ ಸಾಲವನ್ನು ಮರು ಪಾವತಿ ಮಾಡಲಂ ಮಾತ್ರ ಉಪಯೋಗಿಸಿಕೊಳ್ಳುತಕ್ಕದ್ದು ಎಂದು ಉತ್ತರದಲ್ಲಿ ಇದೆ. ಬೆಲೆ ಸ್ಥಿರೀಕರಣ ನಿಧಿಯನ್ನು ಇಂತಹ ಕಡೆ ಇರಿಸಬೇಕೆಂದು ಕಾನೂನು ಇದೆ ನೀವು ಏನು ಹಣವನ್ನು ಕೊಟ್ಟಿದ್ದೀರಿ ಇದಂ ಸರಿಯಲ್ಲ. ದಯಮಾಡಿ ಈ ೩ ಕೋಟಿಯನ್ನು ವಾಪಸ್ ತೆಗೆದು ರೇಷ್ಮೆ ಉದ್ಯಮದಲ್ಲಿರತಕ್ಕಂತಹ ಜನಗಳ ಕಲ್ಯಾಣಕ್ಕಾಗಿ ಉಪಯೋಗಿಸಬೇಕು.

ಶ್ರೀ ಎಂ. ಎಸ್. ಆತ್ಮಾನಂದ.—ರೇಷ್ಮೆ ನೂಲು ಬಿಚ್ಚುವ ಕೈಗಾರಿಕಾ ಘಟಕ ಕೂಡ ಬೆಲೆ ಸ್ಥಿರೀಕರಣ ನಿಧಿಗೆ ಬರುತ್ತದೆ ರೂಲ್‌ನಲ್ಲಿ ಕೂಡ ಇದಕ್ಕೆ ಪ್ರಾವಿಜನ್ ಇದೆ. ಸರಕಾರದ ಆದೇಶವನ್ನು ತೆಗೆದುಕೊಳ್ಳಬೇಕೆಂದು ಇದೆ. ರೇಷ್ಮೆ ವಿನಿಮಯ ಕೇಂದ್ರಗಳಿಗೆ ಬರುವಂತಹ ಕಾಲದಲ್ಲಿ ಇಲಾಖೆ ನಿಗದಿಪಡಿಸಿದ ಪ್ರಮಾಣಕ್ಕಿಂತ ಕಡಿಮೆ ರೇಷ್ಮೆಯನ್ನು ಖರೀದಿಸಿದ್ದಲ್ಲಿ ಮಾರ್ಜಿನ್ ಹಣವನ್ನು ಹಿಂತಿರುಗಿ

ಸುವಂತೆ ಕೇಳುವ ಅಧಿಕಾರ, ಪ್ರಾಧಿಕಾರಕ್ಕೆ ಇದೆ ಸಹಕಾರ ಸಂಘಗಳ ಸಾಲದ ಬಡ್ಡಿಯನ್ನು ಮನ್ನಾ ಮಾಡುವಂತೆ ಸಲಹೆಯನ್ನು ತಾವು ಕೊಟ್ಟಿದ್ದೀರಿ ಆ ಸಲಹೆಯನ್ನು ಪಂಡಿತವಾಗಿ ಕಾರ್ಯಗತ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ.—ಬೇರೆಯವರಿಗೆ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎಂಬ ಬಗ್ಗೆ ವಿವರವನ್ನು ಕೊಟ್ಟಿದ್ದೀರಿ. ಆದರೆ ರೈತರಿಗೆ ನೇರವಾಗಿ ಈ ಹಣದಲ್ಲಿ ಖರ್ಚು ಮಾಡಿರತಕ್ಕಂತಹ ಮೊತ್ತ ಎಷ್ಟು ?

ಶ್ರೀ ಎಂ. ಎಸ್. ಆತ್ಮಾನಂದ.—ಇದಕ್ಕೆ ಬೇರೆ ನೋಟೀಸ್ ಕೊಡಬೇಕಾಗುತ್ತದೆ.

ರಾಜ್ಯದಲ್ಲಿರುವ ಉಕ್ಕಡಗಳಿಂದ ಮಾರಾಟ ಹಾಗೂ ವಾಣಿಜ್ಯ ತೆರಿಗೆಗಳ ಸಂಗ್ರಹ

೭೫. ಶ್ರೀ ಡಿ. ಎ. ಚಿನ್ನಪ್ಪ(ಮಾಡಿಕೇರಿ).—ಮಾನ್ಯ ಆರ್ಥಿಕ ಮತ್ತು ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಾರಾಟ ತೆರಿಗೆ ವಸೂಲಿ ಮಾಡಲು ರಾಜ್ಯದಲ್ಲಿರುವ ಒಟ್ಟು ಶೋಧನಾ ಠಾಣೆಗಳ ಸಂಖ್ಯೆ.

ಆ) ಹಿಂದಿನ ಮೂರು ವರ್ಷಗಳಲ್ಲಿ ಈ ಶೋಧನಾ ಠಾಣೆಗಳಿಂದ ವಸೂಲಾದ ಮೊತ್ತ.

ಇ) ಈ ಶೋಧನಾ ಠಾಣೆಗಳಲ್ಲಿನ ಸಿಬ್ಬಂದಿ ಸಂಖ್ಯೆ (ಹಿಂದಿನ ಮೂರು ವರ್ಷಗಳಲ್ಲಿ ವರ್ಗವಾರು ವಿವರಣೆ ನೀಡಬಹುದು)

ಈ) ಹಿಂದಿನ ಮೂರು ವರ್ಷಗಳ ಸಿಬ್ಬಂದಿ ಖರ್ಚುಗಳು ಶೋಧನಾ ಠಾಣೆಗಳಲ್ಲಿ ವಸೂಲಾದ ಮೊತ್ತಕ್ಕಿಂತ ಕಡಿಮೆಯಾಗಿದ್ದಲ್ಲಿ ಸಿಬ್ಬಂದಿಯನ್ನು ಮುಂದುವರೆಸದಿರುವ ಆಲೋಚನೆ ಇದೆಯೇ ?

ಉ) ಸರ್ಕಾರವು ಕಡಿಮೆ ವಸೂಲಾತಿಯಾಗುತ್ತಿರುವುದರ ಬಗ್ಗೆ ಕಾರಣಗಳನ್ನು ಕಂಡು ಹಿಡಿಯಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದೇ ?

ಶ್ರೀ ಎಂ. ರಾಜಶೇಖರಮೂರ್ತಿ(ವಿತ್ತ ಮಂತ್ರಿಗಳು).—

ಅ) ೪೮

ಆ)

ವರ್ಷ	(ರೂ. ಲಕ್ಷಗಳಲ್ಲಿ)
೮೭–೮೮	೨೫೯–೮೯
೮೮–೮೯	೩೬೧–೮೧
೮೯–೯೦	೫೦೦– ೫

ಇ)

ವರ್ಷ	ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿ	ವಾಣಿಜ್ಯ ತೆರಿಗೆ ಪರಿವೀಕ್ಷಕರು	ದ್ವಿತೀಯ ದರ್ಜೆ ಸಹಾಯಕರು	ಜವಾನರು	ಚಾಲಕರು
೮೭–೮೮	೧೮೦	೧೧೬	೧೩೬	೧೩೨	೨೨
೮೮–೮೯	೧೮೦	೧೧೬	೧೩೬	೧೩೨	೨೨
೮೯–೯೦	೧೮೮	೧೨೪	೧೩೬	೧೩೬	೨೬

ಈ) ಇಲ್ಲ.

ಉ) ಶೋಧನಾ ಠಾಣೆಗಳಲ್ಲಿ ದಂಡ ಸಂಗ್ರಹಣೆಯ ಮೊತ್ತವು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲಿದೆ.

೧೦–೧೫ ಎ.ಎಂ.

ಶ್ರೀ ಡಿ. ಎ. ಚಿನ್ನಪ್ಪ.—ಸ್ವಾಮಿ, ಈ ಇಲಾಖೆಯಲ್ಲಿರುವ ಇಷ್ಟು ಅಧಿಕಾರಿಗಳಿಗೆ ಎಷ್ಟು ಹಣ ಸಂಬಳಕ್ಕಾಗಿ ಖರ್ಚಾಗುತ್ತದೆಂದು ನಾನು ವಿವರವನ್ನು ಕೇಳಿದ್ದೆ. ಆದರೆ ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿಲ್ಲ. ಚೆಕ್‌ಪೋಸ್ಟ್‌ಗಳನ್ನು ೨–೩ ವರ್ಷಕ್ಕೊಮ್ಮೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಬದಲಾಯಿಸಲು ಕಾರಣವೇನು ? ಈ ಚೆಕ್‌ಪೋಸ್ಟ್‌ಗಳಿಂದ ಎಷ್ಟು ಹಣ ವಸೂಲಾಗುತ್ತದೆ ? ಮತ್ತು ಎಷ್ಟು ಖರ್ಚಾಗುತ್ತದೆ ಎಂಬುದನ್ನು ಹೇಳುತ್ತೀರಾ ?